**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ.98/2018**

ದಿನಾಂಕಃ 08.07.2022
(ಸಾಕ್ಷಿಗೆ ಪ್ರಮಾಣ
ಬೋಧಿಸಲಾಯಿತು.)

ಪ್ರಾ.ಸಾಃ 11 (ಚಾ.ಸಾ.15)

| | | |
|---|---|---|
| ಹೆಸರು | ಃ | ಹರೀಶ |
| ತಂದೆಯ ಹೆಸರು | ಃ | ಚಂದ್ರೇಗೌಡ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಆರಕ್ಷಕ ನಿರೀಕ್ಷಕರು, ಇಂದಿರಾ ನಗರ ಠಾಣೆ, ಬೆಂಗಳೂರು |
| ವಾಸ ಸ್ಥಳ | ಃ | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ತಾಃ 26.06.2016 ರಿಂದ ತಾಃ 17.07.2017 ರವರೆಗೆ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ತಾಃ 26.06.2016 ರಂದು ಈ ಪ್ರಕರಣದ ಕಡತವನ್ನು ಪಿಎಸ್ಐ - ಮುರಳಿರವರಿಂದ ಪಡೆದುಕೊಂಡೆನು. ನಂತರ ಗಾಯಾಳು - ಚಾಸಾ.2 ಮತ್ತು ಚಾಸಾ.3 ರವರ ಗಾಯದ ಪ್ರಮಾಣಪತ್ರಗಳನ್ನು ಬೆಂಗಳೂರು ಆಸ್ಪತ್ರೆಯಿಂದ ಪಡೆದುಕೊಂಡೆನು. ಸದರಿ ಗಾಯದ ಪ್ರಮಾಣಪತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಗಾಯದ ಪ್ರಮಾಣಪತ್ರಗಳನ್ನು ಈಗಾಗಲೇ ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ. ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ಕುಣಿಗಲ್ ಸಾರ್ವಜನಿಕ ಆಸ್ಪತ್ರೆಯಿಂದ ಪಡೆದುಕೊಂಡೆನು. ಸಾಕ್ಷಿ ಗುರುತಿಸಿದ ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ತಮ್ಮ ಸಹಿಗಳನ್ನು ಕ್ರಮವಾಗಿ ನಿಪಿ.4(ಬಿ), 5(ಬಿ) ಮತ್ತು 8(ಬಿ) ಎಂದು ಗುರುತಿಸಲಾಯಿತು.

**3.** ನಂತರ ತನಿಖೆ ಪೂರ್ಣಗೊಂಡಿದ್ದು, ಆರೋಪಿತರ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ.ಎಂ.ಡಿ.ಕೆ., ವಕೀಲರಿಂದಃ**

**4.** ಕಡತವನ್ನು ತೆಗೆದುಕೊಂಡ ನಂತರ ಪರಿಶೀಲಿಸಿದೆನು. ಗಾಯಾಳುಗಳು ಹೊರರೋಗಿಯಾಗಿ ಚಿಕಿತ್ಸೆ ಪಡೆದರೋ ಅಥವಾ ಒಳರೋಗಿಯಾಗಿ ಚಿಕಿತ್ಸೆ ಪಡೆದರೋ ನನಗೆ ಗೊತ್ತಿಲ್ಲ.

**5.** ಕೃತ್ಯ ನಡೆದ ಸ್ಥಳಗಳಿಗೆ ನಾನು ಭೇಟಿ ನೀಡಿಲ್ಲ. ರಾಗಿ ಪೈರು ಮತ್ತು ಜೋಳದ ಪೈರು ಕಟಾವು ಮಾಡಿದ ಸ್ಥಳದ ಸರ್ವೆ ನಂಬರ ಮತ್ತು ಅದು ಯಾರ ಸ್ವಾಧೀನದಲ್ಲಿದೆ ಎಂಬುದು ನನಗೆ ಗೊತ್ತಿಲ್ಲ.

**6.** ನಿಪಿ.**4, 5** ಮತ್ತು **8** ಗಾಯದ ಪ್ರಮಾಣಪತ್ರಗಳನ್ನು ನಮ್ಮ ಸಿಬ್ಬಂದಿಯ ಮೂಲಕ ಪಡೆದುಕೊಂಡೆನು. ಸದರಿ ಸಿಬ್ಬಂದಿಯ ಹೆಸರು ನನಗೆ ಗೊತ್ತಿಲ್ಲ. ಆಸ್ಪತ್ರೆಗೆ ಗಾಯದ ಪ್ರಮಾಣಪತ್ರ ನೀಡುವಂತೆ ಕೋರಿಕೆ ಪತ್ರ ಕೊಟ್ಟಿಲ್ಲ. ಗಾಯಾಳು - ರಾಜಣ್ಣ ಮತ್ತು ಆದರ್ಶ ನಿಪಿ.**4** ಮತ್ತು **5** ಮತ್ತು **8** ಇವುಗಳನ್ನು ತಾವೇ ನಮ್ಮ ಠಾಣೆಗೆ ತಂದು ಕೊಟ್ಟರು ಅಂದರೆ ಸರಿಯಲ್ಲ.

**7.** ಸದರಿ ಗಾಯಾಳು - ರಾಜಣ್ಣ ಮತ್ತು ಆದರ್ಶ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಕಡತದಲ್ಲಿ ಎಲ್ಲೂ ನಮೂದಾಗಿಲ್ಲ ಅಂದರೆ ಸರಿಯಲ್ಲ.

**8.** ಆರೋಪಿತರು ರಾಜಣ್ಣ ಮತ್ತು ಆದರ್ಶರವರಿಗೆ ಎಂದೂ ಹಲ್ಲೆ ಮಾಡಿಲ್ಲ, ಆದರೂ ಕೂಡ ಅವರ ವಿರುದ್ಧ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

**9.** ರಾಜಣ್ಣ ಮತ್ತು ಗೀತಾ ಇವರ ಮಗ ಅಭಿಷೇಕ್ ನಮ್ಮ ಠಾಣೆಯ ರೌಡಿ ಶೀಟರ್ ಅಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**